ಪಿ. ಡಬ್ಲು 1

ದಿನಾಂಕಃ 30-09-2022

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರೀಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** 1 ನೇ ಪ್ರತಿವಾದಿ ಪರ ಶ್ರೀ.ಎಮ್ ಎಲ್ ಎನ್ ವಕೀಲರಿಂದ

ನನ್ನ ತಂದೆ ವಾದಿ ಗಣಪಯ್ಯನ ತಂದೆಯ ಹೆಸರು ಕುಪ್ಪಯ್ಯ ಇರುತ್ತದೆ. ಕುಪ್ಪಯ್ಯನ ತಂದೆಯ ಹೆಸರು ಗಣಪಯ್ಯ ಇರುತ್ತದೆ. ದಾವಾ ಸ್ವತ್ತುಗಳು ಗಣಪಯ್ಯ ಮತ್ತು ಕೊಗ್ಗ ಇವರ ಪಿತ್ರಾರ್ಜಿತ ಆಸ್ತಿ ಇರುತ್ತದೆ. ದಾವಾ ಆಸ್ತಿಗಳು ಮೂಲ ಕುಪ್ಪಯ್ಯರಿಂದ ಗಣಪಯ್ಯ ಮತ್ತು ಕೊಗ್ಗರಿಗೆ ಬಂದಿರುತ್ತದೆ. ದಾವಾ ಆಸ್ತಿಗಳು ಕುಪ್ಪಯ್ಯನಿಗೆ ಆತನ ಹಿರಿಯರಿಂದ ಬಂದ ಆಸ್ತಿ ಇರುತ್ತವೆ. ನನ್ನ ಅಜ್ಜ ಅಂದರೆ ಗಣಪಯ್ಯನ ತಂದೆ ಕುಪ್ಪಯ್ಯ ಯಾವ ವರ್ಷ ಮರಣ ಹೊಂದಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಕುಪ್ಪಯ್ಯ 17-08-1966 ರಲ್ಲಿ ಮರಣ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈರಪ್ಪ ದುರ್ಗಪ್ಪ ಕರಿಕೂಸನಮನೆ ಇವರು ನಮ್ಮ ಅಜ್ಜನ ಅಂದರೆ ಕುಪ್ಪಯ್ಯನ ದಾಯಾದಿಗಳು ಇರುತ್ತಾರೆ. ಸದರಿ ಈರಪ್ಪ ದುರ್ಗಪ್ಪ ಕರಿಕೂಸನಮನೆಯವರಿಗೆ ನಮ್ಮ ಅಜ್ಜ ಕುಪ್ಪಯ್ಯನೊಂದಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ದಾವಾಆಸ್ತಿಗಳು ಮೂಲತಃ ಈರಪ್ಪ ದುರ್ಗಪ್ಪ ಕರಿಕೂಸನಮನೆಯವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಈರಪ್ಪ ದುರ್ಗಪ್ಪ ಕರಿಕೂಸನಮನೆಯವರಿಗೆ ಮಕ್ಕಳು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಈರಪ್ಪ ದುರ್ಗಪ್ಪ ಕರಿಕೂಸನಮನೆಯವರಿಗೆ ಮಕ್ಕಳು ಇಲ್ಲದ ಕಾರಣ ಆತನ ತಮ್ಮನ ಮಗಳಾದ ನಾಗಮ್ಮ ಕೋಂ ಅನಂತ ದೇವಾಡಿಗರವರಿಗೆ ದಾವಾ ಆಸ್ತಿಗಳನ್ನು ಮೃತ್ಯುಪತ್ರದ ಮೂಲಕ ದಿನಾಂಕ 15-12-1954 ರಲ್ಲಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಆಸ್ತಿಗಳು ನಾಗಮ್ಮ ಅನಂತ ದೇವಾಡಿಗ ಮರಣ ಹೊಂದಿದ ನಂತರ ಕೊಗ್ಗ ಕುಪ್ಪಯ್ಯ ದೇವಾಡಿಗರವರಿಗೆ ಬಂದಿದ್ದು ಎಂದರೆ ಸರಿಯಲ್ಲ. ಆದ್ದರಿಂದ ದಾವಾಆಸ್ತಿಗಳು ಒಟ್ಟೂ ಕುಟುಂಬದ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಆಸ್ತಿಗಳು ಕೊಗ್ಗ ಕುಪ್ಪಯ್ಯ ದೇವಾಡಿಗರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಆದ್ದರಿಂದ ದಾವಾಆಸ್ತಿಗಳಲ್ಲಿ ವಾದಿಗೆ ಪಾಲು ಕೇಳಲು ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರು ತನ್ನ ಗಂಡ ಕೊಗ್ಗ ಕುಪ್ಪಯ್ಯ ದೇವಾಡಿಗರವರೊಂದಿಗೆ ಬೇರೆಯಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾಆಸ್ತಿಗಳನ್ನು 1 ನೇ ಪ್ರತಿವಾದಿ ಮತ್ತು ಆಕೆ ಗಂಡ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾಸ್ವತ್ತುಗಳು ಯಾವಾಗಲೂ ವಾದಿಯ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ವಾದಿ ತನಗೆ ಸೇರಿದ ಆಸ್ತಿಗಳಲ್ಲಿ ಮಾತ್ರ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಗಂಡ ಕೊಗ್ಗ ಕುಪ್ಪಯ್ಯ ದೇವಾಡಿಗರವರು ದಾವಾ ಆಸ್ತಿಗಳಲ್ಲಿ ಬ್ಯಾಂಕ/ಸೊಸೈಟಿಯಲ್ಲಿ ಸಾಲ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಪರವಾಗಿ ಸಾಲ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಕೊಗ್ಗ ಕುಪ್ಪಯ್ಯ ದೇವಾಡಿಗ ಮರಣ ಹೊಂದಿದ ನಂತರ ಆತನು ಮಾಡಿದ ಸಾಲ 1 ನೇ ಪ್ರತಿವಾದಿಗೆ ಬಂದಿದ್ದು ಬ್ಯಾಂಕನವರು 1 ನೇ ಪ್ರತಿವಾದಿಯ ವಿರುದ್ಧ ಸಾಲ ವಸೂಲಾತಿಗೆ ಕಾನೂನು ಕ್ರಮ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಸಾಲವನ್ನು ತೀರಿಸಲು 1 ನೇ ಪ್ರತಿವಾದಿ ದಾವಾ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ ಗಣಪಯ್ಯ ಮತ್ತು ಕೊಗ್ಗ ಕುಪ್ಪಯ್ಯ ದೇವಾಡಿಗರವರು ಸೇರಿಕೊಂಡು ಮಾರಾಟ ಮಾಡಿ ಸಾಲ ತೀರಿಸಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ತನಗೆ ಬಂದಂತಹ ಪಾಲಿನ ಆಸ್ತಿಯನ್ನು ಮಾರಾಟ ಮಾಡಿ ಬ್ಯಾಂಕ ಸಾಲ ತೀರಿಸಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಕುಟುಂಬದ ಹಣಕಾಸಿನ ಅಡಚಣೆಗಾಗಿ ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಪಾಲಿನ ಆಸ್ತಿಯನ್ನು ಮಾರಾಟ ಮಾಡಿರುವುದರಿಂದ ವಾದಿಗೆ ಯಾವುದೇ ಹಕ್ಕಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 1 ನೇ ಪ್ರತಿವಾದಿ ಮಾಡಿದ ಕ್ರಯಪತ್ರ ಪ್ರಶ್ನೆ ಮಾಡಲು ವಾದಿಗೆ ಯಾವುದೇ ಅಧಿಕಾರ, ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ ಗಣಪಯ್ಯನಿಗೆ ಬಂದ ಆಸ್ತಿಗಳನ್ನು ಆತನು ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ. ವಾದಿ ಮಾರಾಟ ಮಾಡಿದ ಆಸ್ತಿಗಳಿಗೆ 1 ನೇ ಪ್ರತಿವಾದಿ ಯಾವುದೇ ಅಡ್ಡಿ ಆತಂಕ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಯಾವ ಯಾವ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿದೆ. ಸಾಕ್ಷಿ ಮುಂದುವರೆದು ನಮ್ಮ ತಂದೆ ಯಾವುದೇ ಆಸ್ತಿಗಳನ್ನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆಯವರು ದಾವಾಆಸ್ತಿಯಲ್ಲಿಯ ಆಸ್ತಿಗಳನ್ನು ಮಾರಾಟ ಮಾಡಿರುವ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ತಮ್ಮ ಪಾಲಿಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಿರುವುದರಿಂದ 1 ನೇ ಪ್ರತಿವಾದಿಯಿಂದ ಜಮೀನುಗಳನ್ನು ಕಸಿದುಕೊಳ್ಳಲು ಈ ಸುಳ್ಳು ವ್ಯಾಜ್ಯ ದಾಖಲಿದ್ದಾರೆ ಎಂದರೆ ಸರಿಯಲ್ಲ.

 ಓಎಸ್ . 09/2019

ಪಿ. ಡಬ್ಲು 1

ದಿನಾಂಕಃ 30–09–2022

2 ಮತ್ತು 3 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ ಮಾನ್ಯ ಶ್ರೀ ಎಮ್ ಎಲ್ ಎನ್ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿರುತ್ತಾರೆ. ಆದ್ದರಿಂದ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.